ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE: 26/3/21

# ಪ್ರತಿಪಕ್ಷದ ಮೇಲೆ ಸ್ಪೀಕರ್ ಕೆಂಡ



ಬೆಂಗಳೂರು: ಬಜೆಟ್ ಅಧಿವೇಶನದಲ್ಲಿ ಯಾವುದೋ ಒಂದು ವಿಷಯವನ್ನು ಮುಂದಿಟ್ಟು ಪ್ರತಿಭಟನೆ ನಡೆಸುವ ಮೂಲಕ ಪ್ರತಿಪಕ್ಷ ಸದನವನ್ನು ರಾಜಕೀಯ ವೇದಿಕೆ ಆಗಿಸುವ ಮನಸ್ಥಿತಿ ಸೃಷ್ಟಿಸಿಕೊಂಡಿದ್ದು ಅಕ್ಷಮ್ಯ ಎಂದು ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರಹೆಗಡೆ ಕಾಗೇರಿ ಅಸಮಾಧಾನ ಹೊರಹಾಕಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ಕಲಾಪದಲ್ಲಿ ಪ್ರತಿಪಕ್ಷದ ಪಾತ್ರ ಅತ್ಯಂತ ಖೇದ ಉಂಟುಮಾಡಿದೆ. ಈ ಬಾರಿ ಅವರು ನಡೆದುಕೊಂಡ ರೀತಿ ತುಂಬಾ ನೋವುಂಟು ಮಾಡಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಭವಿಷ್ಯದಲ್ಲಿ ಇದನ್ನು ತಿದ್ದಿಕೊಳ್ಳಲಿ ಎಂದೂ ಕಾಗೇರಿ ಅವರು ಸಲಹೆಯಿತ್ತರು. ಅಧಿವೇಶನ ಮಾರ್ಚ್ 31 ರವರೆಗೆ ನಡೆಯಬೇಕಿತ್ತು. ಆದರೆ ಪರಿಸ್ಥಿತಿಯ ಕಾರಣದಿಂದ ಐದು ದಿ ಮುಂಚಿತವಾಗಿಯೇ ಮುಕ್ತಾಯಗೊಳ್ಳುವಂತಾಗಿದ್ದು ದುಸ್ಥಿತಿ ಎಂದ ಸಭಾಧ್ಯಕ್ಷರು ಅಧಿವೇಶವನ್ನು ಜವಬ್ದಾರಿಯುತವಾಗಿ ನಡೆಸಬೇಕಾಗಿದೆ. ಇದಕ್ಕೆ ಶಾಸಕರು, ಸಚಿವರು ಅಧಿಕಾರಿಗಳ ಪಾಲ್ಗೊಳ್ಳುವಿಕೆ ಮುಖ್ಯ ಎಂದರು.

ನಮ್ಮ ಸಂಸದೀಯ ವ್ಯವಸ್ಥೆಗೆ ಶಕ್ತಿ ಬರಬೇಕು ಅಂದರೆ ಪ್ರತಿಪಕ್ಷ ಕೂಡ ಮುಖ್ಯ. ಈ ಬಾರಿ ಅಧಿವೇಶ ನದಲ್ಲಿ ಮೊದಲ ಎರಡು ದಿನ 'ಒಂದು ದೇಶ ಒಂದು ಚುನಾವಣೆ' ಬಗ್ಗೆ ಚರ್ಚೆ ನಿಗದಿಪಡಿಸಲಾಗಿತ್ತು. ಆದರೆ ಈ ಬಗ್ಗೆ ಚರ್ಚೆ ಮಾಡಲು ಪ್ರತಿಪಕ್ಷಗಳು ಬಿಡ ಲಿಲ್ಲ. ಮೊದಲಿನಿಂದ ಸಹಕರಿಸುವ ಭರವಸೆ ನೀಡಿ ಬಳಿಕ ಧರಣಿ ಮಾಡಿದ್ದು ಸರಿಯಲ್ಲ ಎಂದು ಕಾಗೇರಿ ಆಕ್ಷೇಪಿಸಿದರು. ಪ್ರತಿಪಕ್ಷ ಕಾಂಗ್ರೆಸ್ ಬೇರೊಂದು ವಿಚಾರಕ್ಕೆ ಸದನವನ್ನೇ ಮುಂದೂಡುವಂತೆ ಮಾಡಿದ್ದು ದುಸ್ಥಿತಿಯೇ ಸರಿ. ಧರಣಿ, ಪ್ರತಿಭಟನೆ ಸಂಸದೀಯ ವ್ಯವಸ್ಥೆಗೆ ಶೋಭೆ ತರಲ್ಲ. ಭಿನ್ನಾಭಿಪ್ರಾಯ ಸಹಜ. ಆದರೆ ಬೇರೆಯವರ ಹಕ್ಕು ಕಸಿದು ಮಾತನಾಡಲು ಆಗದಂತಹ ಸ್ಥಿತಿ ನಿರ್ಮಿಸುವುದು ಅಕ್ಷಮ್ಯ ಎಂದು ಗುಡುಗಿನ ಸ್ಪೀಕರ್ ಕಾಗೇರಿ, ಸರ್ಕಾರದ ಜೊತೆ ಭಿನ್ನಾಭಿಪ್ರಾಯ ಇದ್ದರೆ ಸದನದ ಹೊರಗಡೆ ಪ್ರತಿಭಟಿಸಿ ಎಂದರೂ ಕೇಳಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಾಜರಾತಿ ಪುಸ್ತಕದಲ್ಲಿ ಶಾಸಕರ ಸಹಿ ಇರುತ್ತದೆ. ಆದರೆ ಸದನದಲ್ಲಿ ಆಸನಗಳು ಖಾಲಿಯಾಗಿರುತ್ತವೆ ಎಂದು ಬೇಸರ ವ್ಯಕ್ತಪಡಿಸಿದರು. ಸದಸ್ಯರು ಕಾರಣ ನೀಡಿಯೇ ಗೈರಾಗುತ್ತಿದ್ದಾರೆ ಆದು ಸರಿಯಲ್ಲ ಎಂದೂ ಸ್ಪೀಕರ್ ಹೇಳಿದರು.